# ಕರ್ನಾಟಕ ಲೋಕಾಯುಕ್ತ

ಸಂ.ಉಪಲೋಕ್–2/ಡಿಇ/400/2018/ಎಆರ್‌ಇ–19

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್. ಅಂಬೇಡ್ಕರ್ ಬೀದಿ,
ಬೆಂಗಳೂರು, ದಿ:13–02–2024.

||ವಿಚಾರಣಾ ವರದಿ ||

**ಉಪಸ್ಥಿತರು:– ಪ್ರಕಾಶ್ ನಾಡಿಗೇರ, ಅಪರ ನಿಬಂಧಕರು,**
ವಿಚಾರಣೆಗಳು–19, ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:–** ಶ್ರೀ ಜಿ. ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ಕೈಗೊಳ್ಳುವ ಕುರಿತು.

**ಉಲ್ಲೇಖ:–**
1. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.12(3)ರ ಅಡಿಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ ವರದಿ ಸಂ.ಕಂಪ್ಲೆಂಟ್/ಉಪಲೋಕ್/ ಬಿಡಿ/32 /2017/ಸನಿಕಾಸ–2, ದಿ:10–05–2017.
2. ಸರ್ಕಾರದ ಆದೇಶ ಸಂ: ನಅಇ 99 ಡಿಎಂಕೆ 2017, ಬೆಂಗಳೂರು ದಿನಾಂಕ:06–10–2017.
3. ನಾಮನಿರ್ದೇಶನ ಸಂ.ಉಪಲೋಕ್–2/ಡಿಇ/400/2018, ಬೆಂಗಳೂರು ದಿನಾಂಕ:25–08–2018.

*****

ದೂರುದಾರರಾದ ***ಶ್ರೀ ಎಂ.ವೈ ಶಿವಕುಮಾರ್ ಬಿನ್ ಲೇಟ್ ಯಲ್ಲಪ್ಪ, ಕೆ.ಆರ್. ಬಡಾವಣೆ, ಎ.ಕೆ.ಕಾಲೋನಿ, 17ನೇ ವಾರ್ಡ, ಮಧುಗಿರಿ ಟೌನ್, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ*** ಇವರು *(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)* **ಆಪಾದಿತ ಸರ್ಕಾರಿ ನೌಕರರಾದ** ***ಶ್ರೀ ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತಮಕೂರು ಜಿಲ್ಲೆ*** ಇವರು *(ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಎಂದು ಕರೆಯಲ್ಪಡುತ್ತಾರೆ)* ಇವರ

ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರಿನಲ್ಲಿ ಮಧುಗಿರಿ ಪಟ್ಟಣದಲ್ಲಿ ಪುರಸಭೆಯಿಂದ 04 ಕಟ್ಟಡಗಳಿಗೆ ಪರವಾನಿಗೆ ಪಡೆಯದೇ ಹಲವಾರು ಬಹುಮಹಡಿ ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಾಣ ಮಾಡುತ್ತಿದ್ದು, ಅವುಗಳನ್ನು ತಡೆಯುವಲ್ಲಿ ಆಪಾದಿತ ಸರ್ಕಾರಿ ನೌಕರರಾದ ನೀವು ವಿಫಲರಾಗಿತ್ತೀರಿ, ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ವಂಚನೆಯಾಗುತ್ತಿದ್ದು, ಈ ಅಕ್ರಮ ಕಟ್ಟಡಗಳನ್ನು ತಡೆದು ನಿಮ್ಮ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದರಿಂದ, ಸದರಿ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ.9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿರುತ್ತದೆ.

2] ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ.12(3) ಅಡಿಯಲ್ಲಿ ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಉಲ್ಲೇಖ(2)ರಲ್ಲಿ ಕಾಣಿಸಿದಂತೆ, ಸರ್ಕಾರದ ಆದೇಶ ಸಂ.ನಅಇ 99 2017, ಬೆಂಗಳೂರು, ದಿ:06-10-2017ರ ಆದೇಶದಂತೆ, ಗೌರವಾನ್ವಿತ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತ ರವರು ಉಲ್ಲೇಖ(3)ರಂತೆ ದಿನಾಂಕ:25-08-2018ರಂದು ಅಪರ ನಿಬಂಧಕರು, ವಿಚಾರಣೆಗಳು-4 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಸೂಚಿಸಿರುತ್ತಾರೆ.

3] ಮೇಲೆ ಹೇಳಿದ ಉಲ್ಲೇಖ(3)ರಲ್ಲಿ ನಮೂದಿಸಿರುವ ಗೌರವಾನ್ವಿತ ಉಪಲೋಕಾಯುಕ್ತ ರವರ ಆದೇಶದ ಮೇರೆಗೆ **ಆ.ಸ.ನೌ** ರವರ **ದೋಷಾರೋಪಣೆ (Article of Charge)** ಅನ್ನು **ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ದೋಷಾರೋಪಣೆಯನ್ನು ಆ.ಸ.ನೌ ರವರಿಗೆ ದಿ:15-08-2018 ರಂದು ಕಳುಹಿಸಲಾಗಿರುತ್ತದೆ.

4] ನಂತರ ಆಪಾದಿತ ಸರ್ಕಾರಿ ನೌಕರರಾದ [ಅಸನೌ] *ಶ್ರೀ ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ* ಇವರಿಗೆ ನೋಟೀಸ್‌ನೊಂದಿಗೆ

ಸದರಿ ದೋಷಾರೋಪಣೆ, ದಾಖಲೆಗಳು ಮತ್ತು ಸಾಕ್ಷಿದಾರರ ಹೆಸರುಗಳು ಒಳಗೊಂಡ ದಾಖಲೆಗಳ ನಕಲುಗಳನ್ನು ಅಸನೌ ರವರಿಗೆ ಜಾರಿಯಾಗಿರುತ್ತದೆ. ಸದರಿ ಅಧಿಕಾರಿ ವಿಚಾರಣೆಗೆ ಹಾಜರಾಗಿದ್ದು, ಅವರಿಗೆ ದೋಷಾರೋಪಣೆಯನ್ನು ಓದಿ ಹೇಳಿ ವಿವರಿಸಿ ಕೇಳಲಾಗಿ, ಸದರಿಯವರು ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ವಿಚಾರಣೆ ನಡೆಸಲು ಒಪ್ಪಿಕೊಂಡಿರುತ್ತಾರೆ.

5] ಆ ಪ್ರಕಾರ ಅಪರ ನಿಬಂಧಕರು, ವಿಚಾರಣೆಗಳು-15 ರವರು ಈ ಪ್ರಕರಣದಲ್ಲಿ ವಿಚಾರಣೆಯನ್ನು ಕೈಗೊಂಡು ವಿಚಾರಣೆ ಮುಕ್ತಾಯಗೊಳಿಸಿದ್ದು, ತಮ್ಮ ವರದಿಯನ್ನು ತಯಾರಿಸಿ ಸಲ್ಲಿಸಲು ಬಾಕಿ ಇತ್ತು. ಆ ಸಂದರ್ಭದಲ್ಲಿ ಅಪರ ನಿಬಂಧಕರು, ವಿಚಾರಣೆಗಳು-15 ಇವರಿಗೆ ಈ ಸಂಸ್ಥೆಯಿಂದ ಬೇರೆ ಸ್ಥಳಕ್ಕೆ ವರ್ಗಾವಣೆಯಾದ ಪ್ರಯುಕ್ತ ಮಾನ್ಯ ನಿಬಂಧಕರು, ಕಲೋ, ಬೆಂಗಳೂರು ರವರ ಕಛೇರಿ ಆದೇಶ ಸಂ.ನೋಟ್/ಉಪಲೋ-1 & 2/ಡಿಇ/ವರ್ಗಾವಣೆ/2023, ದಿ:06-10-2023 ರೀತ್ಯಾ ವಿಚಾರಣಾ ವರದಿಯನ್ನು ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು-19 ರವರಿಗೆ ವಹಿಸಲಾಗಿರುತ್ತದೆ.

6] **ದೂರಿನ ಸಂಕ್ಷಿಪ್ತ ಸಾರಾಂಶ:-** ದೂರುದಾರರು ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣದಲ್ಲಿ ಪುರಸಭೆಯಿಂದ ಕಟ್ಟಡ ಪರವಾನಿಗೆ ಪಡೆಯದೆ (1) ರಾಘವೇಂದ್ರ ನರ್ಸಿಂಗ್ ಹೋಂ, ತುಮಕೂರು ಗೇಟ್, (2) ರಾಘವೇಂದ್ರ ಬಡಾವಣೆಯಲ್ಲಿ ರಾಘವೇಂದ್ರ ನರ್ಸಿಂಗ್ ಹಾಸ್ಟೆಲ್ ಪಕ್ಕದ ಸಾರ್ವಜನಿಕ ಉದ್ಯಾನವನದ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ, (3) ತುಮಕೂರು ಗೇಟ್ ಅಂಚೆಕಚೇರಿ ಪಕ್ಕದ ಕಟ್ಟಡ ಮತ್ತು (4) ಸಾರ್ವಜನಿಕ ಆಸ್ಪತ್ರೆ ಪಕ್ಕದಲ್ಲಿ ಪುರಾತತ್ವ ಇಲಾಖೆ ವ್ಯಾಪ್ತಿಗೆ ಒಳಪಡುವ ಸ್ಥಳದಲ್ಲಿ ನಿರ್ಮಿಸುತ್ತಿರುವ ಕಟ್ಟಡ ಹೀಗೆ ಹಲವಾರು ಬಹುಮಹಡಿ ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಾಣ ಮಾಡುತ್ತಿದ್ದು, ಅದನ್ನು ತಡೆಯುವಲ್ಲಿ ಎದುರುದಾರರು ವಿಫಲರಾಗಿರುತ್ತಾರೆ. ಇದರಿಂದ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ವಂಚನೆಯಾಗುತ್ತಿದ್ದು, ಈ ಅಕ್ರಮ ಕಟ್ಟಡಗಳನ್ನು ತಡೆದು ಎದುರುದಾರರ ವಿರುದ್ದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿರುತ್ತಾರೆ.

28



7] **ಆಸನೌ ಆದ ನೀವು,** ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣದಲ್ಲಿ ಪುರಸಭೆಯಿಂದ ಲೈಸನ್ಸ್ ಪಡೆಯದೇ (1) ರಾಘವೇಂದ್ರ ನರ್ಸಿಂಗ್ ಹೋಂ, ತುಮಕೂರು ಗೇಟ್, (2) ರಾಘವೇಂದ್ರ ಬಡಾವಣೆಯಲ್ಲಿ ರಾಘವೇಂದ್ರ ನರ್ಸಿಂಗ್ ಹಾಸ್ಟೆಲ್ ಪಕ್ಕದ ಸಾರ್ವಜನಿಕ ಉದ್ಯಾನವನದ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ, (3) ತುಮಕೂರು ಗೇಟ್ ಅಂಚೆ ಕಚೇರಿ ಪಕ್ಕದ ಕಟ್ಟಡ ಮತ್ತು (4) ಸಾರ್ವಜನಿಕ ಆಸ್ಪತ್ರೆ ಪಕ್ಕದಲ್ಲಿ ಪುರಾತತ್ವ ಇಲಾಖೆ ವ್ಯಾಪ್ತಿಗೆ ಒಳಪಡುವ ಸ್ಥಳದಲ್ಲಿ ನಿರ್ಮಿಸುತ್ತಿರುವ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಲಾಗಿದ್ದರೂ ಸಹಾ ಅವುಗಳನ್ನು ತೆರವುಗೊಳಿಸುವಲ್ಲಿ ಯಾವುದೇ ಕ್ರಮ ಜರುಗಿಸದೇ ಕರ್ತವ್ಯ ಲೋಪವೆಸಗಿರುತ್ತೀರಿ.

8] ಈ ಮೇಲೆ ಹೇಳಿದ 4 ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಿಸಲಾಗಿದೆ ಎಂದು ನೀವು ನಿಮ್ಮ ಆಕ್ಷೇಪಣೆಯಲ್ಲಿ ಒಪ್ಪಿಕೊಂಡಿದ್ದು, ಸದರಿ ಅನಧಿಕೃತ ಕಟ್ಟಡಗಳನ್ನು ತಡೆಯುವಲ್ಲಿ ವಿಫಲರಾಗಿರುತ್ತೀರಿ ಮತ್ತು ಸದರಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ಕರ್ತವ್ಯಲೋಪವೆಸಗಿರುತ್ತೀರಿ. ಅದರಂತೆ ನೀವು ಸಾರ್ವಜನಿಕ/ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ ನಿಯಮ (3) (i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ ಮಾಡಲಾಗಿದೆ.

9] ಸದರಿ ಆಪಾದನೆಗೆ ಎದುರುದಾರ ಜಿ.ನವೀನ್‌ಚಂದ್ರ, ಇವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ನೀಡಿದ್ದು, ಅದರ ಪ್ರಕಾರ ತಾನು ಮಧುಗಿರಿ ತಾಲ್ಲೂಕು ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ದೂರುದಾರ ಶ್ರೀ ಶಿವಕುಮಾರ್ ಇವರು 04 ಅಕ್ರಮ ಕಟ್ಟಡಗಳ ನಿರ್ಮಾಣ ಕುರಿತು ದೂರನ್ನು ನೀಡಿರುವುದನ್ನು ಒಪ್ಪಿಕೊಂಡಿರುತ್ತಾರೆ. ಮತ್ತು ಖಾತೆದಾರರು ಸದರಿ ಕಟ್ಟಡ ನಿರ್ಮಾಣವನ್ನು ಪರವಾನಿಗೆ ಪಡೆಯದೆ

ಮಾಡುತ್ತಿರುವುದು ಕಂಡುಬಂದಿದ್ದರಿಂದ ಕಟ್ಟಡ ನಿರ್ಮಾಣ ಮಾಡದಂತೆ ತಿಳುವಳಿಕೆ ಪತ್ರ ಜಾರಿ ಮಾಡಲಾಗಿರುತ್ತದೆ. ಆ ನಂತರ 04 ಕಟ್ಟಡ ನಿರ್ಮಾಣ ಮಾಡುತ್ತಿರುವವರು ಕಟ್ಟಡ ಪರವಾನಿಗೆ ನೀಡಲು ಪುರಸಭೆ ಕಛೇರಿಗೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಆದರೆ, ನಗರ ಯೋಜನಾ ನಿರ್ದೇಶಕರ ಕಛೇರಿ, ಕರ್ನಾಟಕ ಸರ್ಕಾರ ಇವರ ಪತ್ರ ಸಂ.ನಗ್ರಾಯೋನಿ/ ಕಟ್ಟಡ ಪರವಾನಿಗೆ/ ಸುತ್ತೋಲೆ/2015-16, ದಿ:22-01-2016ರ ಪತ್ರದಂತೆ ಮತ್ತು ಸ್ಥಳೀಯ ಯೋಜನಾ ಪ್ರಾಧಿಕಾರ ಮಧುಗಿರಿ ಇವರ ಆದೇಶದ ಪ್ರಕಾರ ಪರವಾನಿಗೆಯನ್ನು ತಿರಸ್ಕರಿಸಲಾಗಿರುತ್ತದೆ.

10] ಸದರಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ಕಛೇರಿಯಿಂದ ತಕ್ಷಣ ಕಟ್ಟಡ ನಿಲ್ಲಿಸಲು ತಿಳುವಳಿಕೆ ಪತ್ರ ನೀಡಲಾಗಿರುತ್ತದೆ. ಆ ರೀತಿ ಸುಮಾರು 2-3 ಬಾರಿ ತಿಳುವಳಿಕೆ ಪತ್ರ ನೀಡಲಾಗಿದೆ. ಮತ್ತು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಚೇರಿ ಕರ್ನಾಟಕ ಸರ್ಕಾರ ಇವರ ಸುತ್ತೋಲೆಯಂತೆ ದಿ:18-04-2016ರಲ್ಲಿ ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರಿಗೆ ಗ್ರಾಮ ಠಾಣಾ ಹಾಗೂ ಸದರಿ ಸುತ್ತೋಲೆಯಂತೆ ತಾಂತ್ರಿಕ ಅಭಿಪ್ರಾಯ ನೀಡುವ ಬಗ್ಗೆ ಮಾರ್ಗದರ್ಶನ ನೀಡುವ ಕುರಿತು ನಗರ ಯೋಜನಾ ಇಲಾಖೆಗೆ ಪತ್ರ ಬರೆಯಲಾಗಿರುತ್ತದೆ. ಹಾಗೂ ಅನಧಿಕೃತ ಕಟ್ಟಡಕ್ಕೆ ಮೂಲಭೂತ ಸೌಲಭ್ಯ ಕಲ್ಪಿಸಬೇಕಾಗಿರುವುದರಿಂದ ಪುರಸಭೆ ಕಾಯ್ದೆ 1964 ಕಲಂ.107ರ ಪ್ರಕಾರ ದಂಡ ಪಾವತಿಸಿಕೊಳ್ಳುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆಗೆ ಬಂದಂತಹ ಸಂದರ್ಭದಲ್ಲಿ ಮೌಖಿಕ ಆದೇಶ ನೀಡಿರುತ್ತಾರೆ ಎಂದು ತಿಳಿಸಿರುತ್ತಾರೆ. ತನ್ನ ಕರ್ತವ್ಯವನ್ನು ಕಾನೂನು ಪ್ರಕಾರ ನಿರ್ವಹಿಸಿದ್ದು, ಕರ್ತವ್ಯಕ್ಕೆ ಯಾವುದೇ ರೀತಿಯ ಲೋಪವೆಸಗಿರುವುದಿಲ್ಲವೆಂದು ಪ್ರತಿಪಾದಿಸಿರುತ್ತಾರೆ.

11] ಸದರಿ ದೋಷಾರೋಪಣೆಯನ್ನು ಅಸನೌ ರವರ ವಿರುದ್ಧ ರುಜುವಾತುಪಡಿಸಲು ಸಕ್ಷಮ ಪ್ರಾಧಿಕಾರದ ಪರವಾಗಿ ಪಿಡ.ಬ್ಲ್ಯೂ.-1 ಮತ್ತು 2 ರವರುಗಳ ವಿಚಾರಣೆ ಮಾಡಿದ್ದು, ನಿಶಾನೆ ಪಿ-1 ರಿಂದ ನಿಶಾನೆ ಪಿ-7 ರವರೆಗೆ ದಾಖಲೆಗಳನ್ನು ಹಾಜರಪಡಿಸಿರುತ್ತಾರೆ. ಅ.ಸ.ನೌ ರವರು ತಮ್ಮ ಪರವಾಗಿ ಯಾವುದೇ ಸಾಕ್ಷಿಯ ವಿಚಾರಣೆ ಮಾಡಿರುವುದಿಲ್ಲ.

13/2

12] ನಾನು ಸಕ್ಷಮ ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಹಾಗೂ ಅಸನೌ ರವರ ಪರವಾಗಿ ನ್ಯಾಯವಾದಿಗಳ ವಾದವಿವಾದಗಳನ್ನು ಆಲಿಸಿರುತ್ತೇನೆ. ಪ್ರಕರಣದಲ್ಲಿ ಹಾಜರಪಡಿಸಲಾದ ಮೌಖಿಕ ಹಾಗೂ ದಾಖಲೆಗಳ ಸಾಕ್ಷಿಯನ್ನು ನಾನು ಕೂಲಂಕುಷವಾಗಿ ಪರಿಶೀಲಿಸಿರುತ್ತೇನೆ.

13] ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:–** ಸಕ್ಷಮ ಪ್ರಾಧಿಕಾರದವರು ಅಸನೌ ರವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1) (i) ಮತ್ತು (iii) ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತು ಪಡಿಸಿರುತ್ತಾರೆಯೇ?

**ಅಂಶ–2** :– ಅಂತಿಮ ಆದೇಶವೇನು?

14] ಈ ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ–1 :–ಸಕಾರಾತ್ಮಕ**

**ಅಂಶ–2:– ಅಂತಿಮ ಆದೇಶದಂತೆ.**

## ॥ ಕಾರಣಗಳು ॥

15] **ಅಂಶ–1:–** ಪ್ರಸ್ತುತ ಪ್ರಕರಣದಲ್ಲಿ ನಿರ್ವಿವಾದದ ಸಂಗತಿಗಳೆಂದರೆ ಅಸನೌ ಶ್ರೀ ಜಿ.ನವೀನ್‌ಚಂದ್ರ, ಮಧುಗಿರಿ ಪುರಸಭೆಯ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಸದರಿ ಪುರಸಭೆಯ ವ್ಯಾಪ್ತಿಯಲ್ಲಿಯ ಮಧುಗಿರಿ ಪಟ್ಟಣದ ಪುರಸಭೆಯಿಂದ ಕಟ್ಟಡದ ಪರವಾನಿಗೆ ಪಡೆಯದೇ 04 ಬಹುಮಹಡಿ ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಾಣ ಮಾಡುತ್ತಿದ್ದರು ಎನ್ನುವುದು. ಈ ವಿಚಾರವನ್ನು ಸ್ವತ: ಅಸನೌ ಶ್ರೀ ಜಿ. ನವೀನಚಂದ್ರ ರವರು ತಮ್ಮ ರಕ್ಷಣಾತ್ಮಕ ಹೇಳಿಕೆಯಲ್ಲಿ ಸ್ಪಷ್ಟವಾಗಿ ಒಪ್ಪಿರುವುದಲ್ಲದೆ ಸದರಿ 04 ಕಟ್ಟಡಗಳನ್ನು ಪರವಾನಿಗೆ ಇಲ್ಲದೆ

ನಿರ್ಮಾಣ ಮಾಡುತ್ತಿದ್ದರು ಅನ್ನುವ ವಿಚಾರ ತಮ್ಮ ಗಮನಕ್ಕೆ ಬಂದನಂತರ ಸ್ವತ: 2–3 ಬಾರಿ ಆ ಕಾಮಗಾರಿಗಳನ್ನು ನಿಲ್ಲಿಸುವಂತೆ ನೋಟೀಸ್ ನೀಡಿರುವುದನ್ನು ಕೂಡಾ ದಾಖಲೆಗಳ ಮೂಲಕ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಸಕ್ಷಮ ಪ್ರಾಧಿಕಾರಿಗಳ ಪರವಾಗಿ ಸಾಕ್ಷಿಗಳ ವಿಚಾರಣೆ ಮುಕ್ತಾಯಗೊಂಡ ನಂತರ ಅಸನೌ ರವರ ಕರ್ನಾಟಕ ನಾಗರಿಕ ಸೇವೆಗಳ (ವರ್ಗೀಕರಣ ನಿಯಂತ್ರಣ & ಮೇಲ್ಮನವಿ) ನಿಯಮ 11 (18)ರನ್ವಯ ಮಾಡಿಕೊಳ್ಳಲಾದ ಹೇಳಿಕೆಯಲ್ಲಿಯು ಸಹ 5ನೇ ಪ್ರಶ್ನೆಯನ್ನು ಅಸನೌ ರವರು ಖುದ್ದಾಗಿ ಪರಿಶೀಲನೆ ಮಾಡಿದ 04 ಕಟ್ಟಡಗಳು ಅಕ್ರಮವಾಗಿ ಕಟ್ಟಲಾಗಿದ್ದು, ಪುರಸಭೆಯಿಂದ ಯಾವುದೇ ಲೈಸೆನ್ಸ್ ಪಡೆದುಕೊಂಡಿರುವುದಿಲ್ಲ. ಹಾಗೂ ಲೈಸೆನ್ ಪಡೆದುಕೊಳ್ಳದೆ ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದ ಪಕ್ಷದಲ್ಲಿ ಪುರಸಭೆಯ ಮುಖ್ಯಾಧಿಕಾರಿ ಕರ್ನಾಟಕ ಪೌರಸಭೆಗಳ ಅಧಿನಿಯಮಗಳ ಅಡಿ ಅಂತಹ ಕಟ್ಟಡ ಕಾಮಗಾರಿಯನ್ನು ತಡೆಯಬಹುದಾಗಿರುತ್ತದೆ ಎಂದು ಕೇಳಿದಾಗ ಅಸನೌ ರವರು ಸ್ಪಷ್ಟವಾಗಿ ಅಂತಹ ಕಟ್ಟಡಗಳಿಗೆ ನಾನು ನೋಟೀಸ್ ಕೊಟ್ಟಿದ್ದೇನೆ ಎಂದು ಹೇಳುವ ಮೂಲಕ ಆ ಕಟ್ಟಡಗಳ ನಿರ್ಮಾಣ ಲೈಸೆನ್ಸ್ ಪಡೆದುಕೊಳ್ಳದೆ ಅಕ್ರಮವಾಗಿ ನಡೆಯುತ್ತಿತ್ತು ಎನ್ನುವುದು ಒಪ್ಪಿಕೊಂಡಂತಾಗಿರುತ್ತದೆ.

16] ಪಿಡಬ್ಲ್ಯೂ–2 ಶ್ರೀ ಎನ್.ಎಲ್ ಪ್ರಭು, 2016–17ನೇ ಸಾಲಿನಲ್ಲಿ ತುಮಕೂರು ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಪುರಸಭಾ ತಹಶೀಲ್ದಾರ್‌ರಾಗಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸಿದ್ದು, ಆ ಸಂದರ್ಭದಲ್ಲಿ ಸದರಿಯವರು ಖುದ್ದಾಗಿ ದೂರುದಾರ ಶ್ರೀ ಎನ್.ವೈ.ಶಿವಕುಮಾರ್ ಇವರು ನೀಡಿದ ದೂರಿಗೆ ಸಂಬಂಧಿಸಿದಂತೆ ಯೋಜನಾ ನಿರ್ದೇಶಕರು ನೇಮಿಸಿದ ಪ್ರಕಾರ ಸದರಿ 04 ಕಟ್ಟಡಗಳು, (1) ಮಧುಗಿರಿ ಪಟ್ಟಣ ತುಮಕೂರು ಗೇಟ್‌ಬಳಿ ಇರುವ ರಾಘವೇಂದ್ರ ನರ್ಸಿಂಗ್ ಹೋಂ ಕಟ್ಟಡ, (2) ರಾಘವೇಂದ್ರ ಬಡಾವಣೆಯಲ್ಲಿ ರಾಘವೇಂದ್ರ ನರ್ಸಿಂಗ್ ಹಾಸ್ಟೇಲ್ ಪಕ್ಕದ ಸಾರ್ವಜನಿಕರ ಉದ್ಯಾನವನದ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ, (3) ತುಮಕೂರು ಗೇಟ್ ಅಂಚೆ ಕಛೇರಿ ಪಕ್ಕದ ಕಟ್ಟಡ ಹಾಗೂ (4) ಸಾರ್ವಜನಕರ ಆಸ್ಪತ್ರೆ ಪಕ್ಕದಲ್ಲಿ ಪುರಾತತ್ವ ಇಲಾಖೆಯ ವ್ಯಾಪ್ತಿಗೆ ಒಳಪಡುವ ಸ್ಥಳದಲ್ಲಿ ನಿರ್ಮಿಸುತ್ತಿರುವ ಕಟ್ಟಡ ಇವುಗಳನ್ನು ಪರಿಶೀಲನೆ ಮಾಡಿದ್ದು, ಸದರಿ ಕಟ್ಟಡಗಳಿಗೆ ಪುರಸಭೆಯಿಂದ

13/2

32



ಯಾವುದೇ ಪರವಾನಿಗೆಯನ್ನು ಪಡೆದಿರಲಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿರುತ್ತಾರೆ. ಅಲ್ಲದೆ ಲೈಸೆನ್ಸ್ ಪಡೆದುಕೊಳ್ಳದೆ ಅಕ್ರಮವಾಗಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದ ಪಕ್ಷದಲ್ಲಿ ಪುರಸಭೆ ಮುಖ್ಯಾಧಿಕಾರಿ ಕರ್ನಾಟಕ ಪೌರಸಭೆಗಳ ಅಧಿನಿಯಮಗಳ ಅಡಿ ಅಂತಹ ಕಟ್ಟಡಗಳ ಕಾಮಗಾರಿಯನ್ನು ತಡೆಯಬಹುದಾಗಿರುತ್ತದೆ ಎನ್ನುವುದನ್ನು ಸ್ಪಷ್ಟಪಡಿಸಿರುತ್ತಾರೆ. ಈ ಸ್ಪಷ್ಟವಾದ ಹೇಳಿಕೆಯನ್ನು ಅಸನೌ ರವರ ಪರವಾಗಿ ಯಾವುದೇ ರೀತಿಯಿಂದ ಪ್ರಶ್ನಿಸಿರುವುದಿಲ್ಲ. ಇದೂ ಅಲ್ಲದೆ ಪಾಟೀ ಸವಾಲಿನಲ್ಲಿ ಅಸನೌ ರವರು 04 ಕಟ್ಟಡಗಳ ಮಾಲೀಕರಿಗೆ ಕಟ್ಟಡ ನಿರ್ಮಾಣ ನಿಲ್ಲಿಸುವಂತೆ ವಿವಿಧ ದಿನಾಂಕಗಳಂದು ನೋಟೀಸ್‌ಗಳನ್ನು ನೀಡಿದ್ದಾರೆ ಎನ್ನುವ ಅಸನೌ ರವರ ಪರವಾಗಿ ಮುಂದಿಟ್ಟ ಸೂಚನೆಯನ್ನು ಕೂಡಾ ಒಪ್ಪಿರುತ್ತಾರೆ. ಇದರಿಂದ ಅಸನೌ ರವರಿಗೂ ಸಹ ಸ್ವತ: ತನ್ನ ಪುರಸಭೆಯ ವ್ಯಾಪ್ತಿಯಲ್ಲಿಯೇ ಮೇಲೆ ಹೇಳಿದ 04 ಕಟ್ಟಡಗಳ ಕಾಮಗಾರಿ ಅನಧಿಕೃತವಾಗಿ ಕೈಗೊಳ್ಳಲಾಗಿತ್ತು ಎನ್ನುವ ವಿಚಾರ ತಿಳಿದಿತ್ತು ಅನ್ನುವುದು ನಿರ್ವಿವಾದವಾಗಿರುತ್ತದೆ. ಅಲ್ಲದೆ ನಿಶಾನೆ ಪಿ-4ರಲ್ಲಿ ಹಾಜರಪಡಿಸಿರುವ ದೂರುದಾರರಿಗೆ ಅಸನೌ ಮುಖ್ಯಾಧಿಕಾರಿ ರವರು ನೀಡಿದ 02 ಹಿಂಬರಹಗಳ ಪ್ರಕಾರ ಕೂಡಾ ಮಧುಗಿರಿ ಟೌನ್ ಮಾಸ್ತಿವೆಂಕಟೇಶ್ ಅಯ್ಯಂಗಾರ ವೃತ್ತದ ಬಳಿ ಇರುವ ರಾಘವೇಂದ್ರ ನರ್ಸಿಂಗ್ ಹೋಮ ಮತ್ತು ಇದರ ಮುಂಭಾಗದಲ್ಲಿ ನಿರ್ಮಾಣ ಮಾಡುತ್ತಿರುವ ಕಟ್ಟಡಗಳಿಗೆ ಪುರಸಭೆ ವತಿಯಿಂದ ಕಟ್ಟಡ ನಿರ್ಮಾಣ ಮಾಡಲು ಪರವಾನಿಗೆ ನೀಡಿರುವುದಿಲ್ಲ. ಅದೇ ರೀತಿ ಮಧಗಿರಿ ಟೌನ್ ವ್ಯಾಪ್ತಿಯ ಸಾರ್ವಜನಿಕ ಆಸ್ಪತ್ರೆಯ ಪಕ್ಕದಲ್ಲಿಯ ಕಟ್ಟಡಗಳ ನಿರ್ಮಾಣಕ್ಕೆ ಪುರಸಭೆಯಿಂದ ಯಾವುದೇ ಪರವಾನಿಗೆಯನ್ನು ನೀಡಿರುವುದಿಲ್ಲ ಎನ್ನುವ ಉತ್ತರದ ಹಿಂಬರಹವನ್ನು ಅಸನೌ ರವರೇ ನೀಡಿರುತ್ತಾರೆ. ಇದೂ ಅಲ್ಲದೆ ಪೋಲೀಸ್ ಉಪನಿರೀಕ್ಷಕರು, ಮಧುಗಿರಿ ಪೋಲೀಸ್ ಠಾಣೆ ಇವರಿಗೆ ಅಸನೌ ರವರು ದಿ:6-12-2016ರಂದು ಒಂದು ದೂರನ್ನು ಸಲ್ಲಿಸಿ ತುಮಕೂರ ಗೇಟ್ ಬಳಿ ನಿರ್ಮಾಣವಾಗುತ್ತಿರುವ ಕಟ್ಟಡ ಕಾಮಗಾರಿಯ ಕುರಿತು ಶ್ರೀ ಪುಟ್ಟಯ್ಯ ಬಿನ್ ಲೇಟ್ ಮಲ್ಲಯ್ಯ ಮತ್ತು ಇತರರ ವಿರುದ್ಧ ಅನಧಿಕೃತ ಕಟ್ಟಡ ನಿರ್ಮಾಣ ಕಾರ್ಯ ಕೈಗೊಳ್ಳುತ್ತಿರುವ ಕುರಿತು ಸೂಕ್ತ ಕ್ರಮ ಜರುಗಿಸಲು ಕೋರಿಕೊಂಡಿರುತ್ತಾರೆ. ಈ ದಾಖಲೆಯಿಂದ ಕೂಡಾ ಅನಧಿಕೃತ ಕಟ್ಟಡಗಳ ಕಾಮಗಾರಿ ನಡೆಯುತ್ತಿತ್ತು ಮತ್ತು ಆ ವಿಷಯ

ಅಸನೌ ರವರ ಗಮನಕ್ಕೆ ಬಂದಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಆದರೆ, ಎಲ್ಲಿಯೂ ಸಹ ಕಟ್ಟಡಗಳ ನಿರ್ಮಾಣವನ್ನು ಕಾನೂನು ಕ್ರಮ ಜರುಗಿಸಿ ತಡೆಹಿಡಿಯಲಾಯಿತು ಅಥವಾ ನಿಲ್ಲಿಸಲಾಯಿತು ಎನ್ನುವ ಕುರಿತು ಯಾವುದೇ ರೀತಿಯ ಸಾಕ್ಷ್ಯಾಧಾರ ಈ ಪ್ರಕರಣದಲ್ಲಿ ಹಾಜರಪಡಿಸಿರುವುದಿಲ್ಲ. ಹೀಗಿರುವಾಗ ಕೇವಲ ಕಟ್ಟಡಗಳ ನಿರ್ಮಾಣವನ್ನು ನಿಲ್ಲಿಸುವಂತೆ ನೋಟೀಸ್ ಕೊಟ್ಟ ಮಾತ್ರಕ್ಕೆ ಅಸನೌ ರವರು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮತ್ತು ಪ್ರಾಮಾಣಿಕವಾಗಿ ನಿರ್ವಹಿಸಿರುತ್ತಾರೆ ಎಂದು ಹೇಳಲು ಬರಲಾರದು. ಬದಲಾಗಿ, ವಿವಿಧ ದಿನಾಂಕಗಳಲ್ಲಿ ಕೇವಲ ಕಟ್ಟಡ ನಿರ್ಮಾಣ ನಿಲ್ಲಿಸುವಂತೆ ನೋಟೀಸ್ ನೀಡಿ ಅಸನೌ ರವರು ವ್ಯರ್ಥ ಕಾಲಹರಣ ಮಾಡಿರುತ್ತಾರೆ ಎಂದೇ ಹೇಳಬೇಕಾಗುತ್ತದೆ.

17] ಅ.ಸ.ನೌ ರವರ ಪರವಾಗಿ ಅವರ ನ್ಯಾಯಾವಾದಿಗಳು ತಮ್ಮ ವಾದ ಮಂಡಿಸುತ್ತಾ, ನಿಶಾನೆ ಪಿ–7 ಪುರಸಭೆ ತಹಶೀಲ್ದಾರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ ಇವರು ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ ತುಮಕೂರು ಇವರಿಗೆ ನೀಡಿದ ವರದಿಯನ್ನು ಉಲ್ಲೇಖಿಸುತ್ತಾ, ಸದರಿ ವರದಿಯ ಪ್ರಕಾರ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಕುರಿತು ತಹಶೀಲ್ದಾರ್ ರವರು ಕ್ರಮ ತೆಗೆದುಕೊಳ್ಳಬೇಕಿತ್ತು. ಆ ಕಾರ್ಯ ಅಸನೌ ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ ಇವರದಾಗಿರಲಿಲ್ಲ ಎಂದು ವಾದ ಮಂಡಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನಿಶಾನೆ ಪಿ–7 ದಾಖಲೆಯನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ವರದಿಯಲ್ಲಿ ಪುರಸಭೆ ತಹಶೀಲ್ದಾರ್ ರವರು ಸ್ಪಷ್ಟವಾಗಿ ಮೇಲೆ ಉಲ್ಲೇಖಿಸಿದ 04 ಕಟ್ಟಡಗಳಿಗೆ ಪುರಸಭೆಯಿಂದ ಯಾವುದೇ ಪರವಾನಿಗೆಯನ್ನು ಪಡೆದುಕೊಳ್ಳದೆ ಅನಧಿಕೃತವಾಗಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಮತ್ತು ಅಸನೌ ರವರು ಮಧುಗಿರಿ ಪುರಸಭೆಯ ಮುಖ್ಯಾಧಿಕಾರಿಯಾಗಿ ಕಟ್ಟಡ ಕಾರ್ಯ ನಿಲ್ಲಿಸುವ ಕುರಿತು ಕೇವಲ ನೋಟೀಸ್‌ಗಳನ್ನು ಮಾತ್ರ ನೀಡಿ ಮುಂದೆ ಯಾವುದೇ ಕ್ರಮವನ್ನು ಜರುಗಿಸದೇ ಇರುತ್ತಾರೆಂದು ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಿರುತ್ತಾರೆ.

13/2

34



18] ಇದಲ್ಲದೆ ಪ್ರಾರಂಭಿಕ ಹಂತದಲ್ಲಿರುವ ನಿಯಮ ಬಾಹಿರವಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಗಳಿಗೆ ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ.187ರಲ್ಲಿ ತಿಳಿಸಿರುವಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಈಗಾಗಲೇ ನಿಯಮ ಬಾಹಿರವಾಗಿ ನಿರ್ಮಿಸಿರುವ ಕಟ್ಟಡಗಳಿಗೆ ಪೌರಸಭೆ ಅಧಿನಿಯಮ 1964ರ ಕಲಂ.107ರಂತೆ ದಂಡ ವಿಧಿಸಿ ಕಛೇರಿ ದಾಖಲೆಯಲ್ಲಿ ದಾಖಲಿಸಬಹುದಾಗಿರುತ್ತದೆ ಎಂದು ವರದಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಮತ್ತು ಪೌರಸಭೆಗಳ ಅಧಿನಿಯಮ 1964ರ ಕಲಂ.187(ಬಿ)ರಲ್ಲಿ ತಿಳಿಸಿರುವಂತೆ ಅನಧಿಕೃತ ಮಾರ್ಗಾಂತರಗಳು ಅಥವಾ ನಿರ್ಮಾಣಗಳನ್ನು ತಡೆಯಲು ವಿಫಲವಾದ ಕಾರಣಕ್ಕೆ ಏಕೆ ಕ್ರಮ ಕೈಗೊಳ್ಳಬಾರದೆಂದು ಮುಖ್ಯಾಧಿಕಾರಿ ಮಧುಗಿರಿ ಪುರಸಭೆ, ಇವರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಬಹುದಾಗಿರುತ್ತದೆ ಎಂದು ಸಹ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಇವರಿಗೆ ವರದಿ ಮಾಡಿದ್ದು ಇರುತ್ತದೆ. ಅಂದರೆ, ಈ ವರದಿಯಿಂದ ಅಸನೌ ಶ್ರೀ ಜಿ. ನವೀನ್ ಚಂದ್ರ, ಅಂದಿನ ಮುಖ್ಯಾಧಿಕಾರಿ, ಮಧುಗಿರಿ ಪುರಸಭೆ ಇವರು ಕರ್ತವ್ಯಲೋಪ ಎಸಗಿರುತ್ತಾರೆ ಎನ್ನುವುದು ಸಾಬಿತಾಗುತ್ತದೆ.

19] ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ.107ರ ಪ್ರಕಾರ ಯಾವುದೇ ವ್ಯಕ್ತಿ ಪುರಸಭೆಯ ವ್ಯಾಪ್ತಿಯಲ್ಲಿ ಸೂಕ್ತ ಪರವಾನಿಗೆಯನ್ನು ಪಡೆಯದೆ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಕೈಗೊಂಡಲ್ಲಿ ಅಂತಹ ವ್ಯಕ್ತಿ ದಂಡನೆಗೆ ಅರ್ಹನಾಗಿರುತ್ತಾನೆ. ಕಾರಣ, ಅಂತಹ ಸಂದರ್ಭದಲ್ಲಿ ಮುಖ್ಯಾಧಿಕಾರಿ ಸದರಿ ಕಾನೂನು ಪ್ರಕಾರ ದಂಡ ವಸೂಲಾತಿಗೆ ಕ್ರಮ ಜರುಗಿಸುವುದು ಕಡ್ಡಾಯವಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಮೇಲೆ ಹೇಳಿದ 04 ಕಟ್ಟಡಗಳ ಕಾಮಗಾರಿಯನ್ನು ಅನಧಿಕೃತವಾಗಿ ಕೈಗೆತ್ತಿಕೊಳ್ಳಲಾಗಿತ್ತು. ಮತ್ತು ಆ ವಿಷಯ ಅಸನೌ ಮುಖ್ಯಾಧಿಕಾರಿ ಇವರ ಗಮನಕ್ಕೂ ಕೂಡಾ ಬಂದಿದ್ದು, ಅಸನೌ ರವರು ಕೇವಲ ಕಟ್ಟಡ ಕಾಮಗಾರಿಯನ್ನು ನಿಲ್ಲಿಸುವಂತೆ ನೋಟೀಸ್ ನೀಡಿ ಮುಂದೆ ಯಾವುದೇ ಕ್ರಮವನ್ನು ಅಥವಾ ದಂಡ ವಸೂಲಾತಿ ಬಗ್ಗೆ ಕ್ರಮ ಜರುಗಿಸದೇ ಇರುವುದು ದಾಖಲೆಗಳ ಆಧಾರದ ಮೇಲೆ ಸ್ಪಷ್ಟವಾಗಿರುತ್ತದೆ.

20] ಇದು ಅಲ್ಲದೆ ಪೌರಸಭೆಗಳ ಅಧಿನಿಯಮ 1964ರ ಕಲಂ.187(8)ರ ಪ್ರಕಾರ ಸದರಿ ಕಟ್ಟಡಗಳನ್ನು ತೆರವುಗೊಳಿಸುವುದಕ್ಕೆ ಪುರಸಭೆಯ ಮುಖ್ಯಾಧಿಕಾರಿಯೆ ಅಧಿಕಾರವುಳ್ಳವರಾಗಿ ಆ ರೀತಿಯ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲವೆಂಬುದು ಕೂಡಾ ರುಜುವಾತಾಗಿರುತ್ತದೆ.

21] ಕಾರಣ, ಮೇಲೆ ಹೇಳಿದ ಎಲ್ಲ ಕಾರಣಗಳಿಗಾಗಿ, ಸಕ್ಷಮ ಪ್ರಾಧಿಕಾರವು ಅಸನೌ ಶ್ರೀ ಜಿ. ನವೀನ್ ಚಂದ್ರ, ಅಂದಿನ ಮುಖ್ಯಾಧಿಕಾರಿ, ಪುರಸಭೆ, ಮಧುಗಿರಿ ಇವರು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಮತ್ತು ನಿಷ್ಠೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1) (i) ಮತ್ತು (iii)ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸಿರುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪವನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು **ಸಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

22] **ಅಂಶ–2:– ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

**॥ ನಿರ್ಣಯ ॥**

ಶಿಸ್ತು ಪ್ರಾಧಿಕಾರವು ಅಸನೌ ***ಶ್ರೀ ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ*** ಇವರು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪ್ರಾಮಾಣಿಕತೆಯನ್ನು ಮತ್ತು ನಿಷ್ಠೆಯನ್ನು ಪ್ರದರ್ಶಿಸದೆ ಸಾರ್ವಜನಿಕ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕೆ.ಸಿ.ಎಸ್.ಆರ್ ನಿಯಮ 1966ರ ನಿಯಮ 3(1)(i) ಮತ್ತು (iii) ಗಳನ್ನು ಉಲ್ಲಂಘಿಸಿರುತ್ತಾರೆಂದು ರುಜುವಾತುಪಡಿಸಿರುತ್ತದೆ.

ಅಸನೌ ರವರ ಜನ್ಮ ದಿನಾಂಕ: 15–03–1974
ಅಸನೌ ರವರ ನಿವೃತ್ತಿ ದಿನಾಂಕ:31–03–2034

13/2

ಗೌರವಾನ್ವಿತ ಉಪಲೋಕಾಯುಕ್ತ ರವರ ಅನಮೋದನೆಗಾಗಿ ಹಾಗೂ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

13/2/2024

[ಪ್ರಕಾಶ್ ನಾಡಿಗೇರ]
ಅಪರ ನಿಬಂಧಕರು, ವಿಚಾರಣೆಗಳು–19
ಬೆಂಗಳೂರು

**॥ಅನುಬಂಧ॥**

1] ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷಿದಾರರುಗಳ ಪಟ್ಟಿ

| | |
|---|---|
| ಪಿ.ಡಬ್ಲ್ಯೂ–1 | ಶ್ರೀ ಎಂ.ವೈ ಶಿವಕುಮಾರ್ ಲೇಟ್ ಯಲ್ಲಪ್ಪ (ದೂರುದಾರ) |
| ಪಿ.ಡಬ್ಲ್ಯೂ–2 | ಶ್ರೀ ಎನ್.ಎಲ್ ಪ್ರಭು ತಂದೆ ಬಿ.ಎಂ. ಚಿಕ್ಕಣ್ಣ, ಕಛೇರಿ ವ್ಯವಸ್ಥಾಪಕರು |

2] ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ

| | |
|---|---|
| ನಿಶಾನೆ ಪಿ–1<br>ನಿಶಾನೆಪಿ1(ಎ) | ಪ್ರಪತ್ರ–1 (ಮೂಲ)<br>ದೂರುದಾರರ ಸಹಿ |
| ನಿಶಾನೆ ಪಿ–2<br>ನಿಶಾನೆ ಪಿ–2(ಎ) | ಪ್ರಪತ್ರ–2 (ಮೂಲ)<br>ದೂರುದಾರರ ಸಹಿ |
| ನಿಶಾನೆ ಪಿ–3<br>ನಿಶಾನೆ ಪಿ–3(ಎ) | ದೂರುದಾರರ ದೂರು ಅರ್ಜಿ (ಮೂಲ)<br>ದೂರುದಾರರ ಸಹಿ |
| ನಿಶಾನೆ ಪಿ–4 | ದೂರುದಾರರ ದೂರು ಅರ್ಜಿ (ನಕಲು ಹಾಗೂ ಇತರೆ ದಾಖಲೆಗಳು) |
| ನಿಶಾನೆ ಪಿ–5<br>ನಿಶಾನೆ ಪಿ–5(ಎ) | ದೂರುದಾರರು ದಿ:23–03–2017ರಂದು ಸಲ್ಲಿಸಿದ ಪ್ರತ್ಯುತ್ತರ (ಮೂಲ)<br>ದೂರುದಾರರ ಸಹಿ |

13/2/24

| | |
|---|---|
| ನಿಶಾನೆ ಪಿ–6 | ದಿ:26–01–2017ರ ವಿಶ್ವವಾಣಿ ದಿನಪತ್ರಿಕೆ (ನಕಲು) |
| ನಿಶಾನೆ ಪಿ–7 | ಪುರಸಭಾ ತಹಶೀಲ್ದಾರ್, ಜಿಲ್ಲಾ ನಗರಾಭಿವೃದ್ಧಿ ಕೋಶ, ತಮಕೂರು ಜಿಲ್ಲೆ ಇವರು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಇವರಿಗೆ ಸಲ್ಲಿಸಿದ ವರದಿ (ನಕಲು) |

1. ಅಸನೌ ರವರು ತಮ್ಮ ಪರವಾಗಿ ಹಾಜರಪಡಿಸಿದ ದಾಖಲೆಗಳ ಪಟ್ಟಿ

| | |
|---|---|
| – | – |

1] ಅಸನೌ ರವರ ಪರ ಸಾಕ್ಷಿದಾರರುಗಳ ಪಟ್ಟಿ

| | |
|---|---|
| – | – |

3/4/2024

[ಪ್ರಕಾಶ್ ನಾಡಿಗೇರ]
ಅಪರ ನಿಬಂಧಕರು, ವಿಚಾರಣೆಗಳು–19
ಬೆಂಗಳೂರು

**ಕರ್ನಾಟಕ ಲೋಕಾಯುಕ್ತ**

ನಂ.ಉಪಲೋಕ್-2/ಡಿಇ/400/2018/ಎಆರ್‌ಇ-19

ಬಹುಮಹಡಿಗಳ ಕಟ್ಟಡ
ಡಾ:ಬಿ.ಆರ್.ಅಂಬೇಡ್ಕರ್ ವೀದಿ
ಬೆಂಗಳೂರು-560001
ದಿನಾಂಕ:16-02-2024

## -:: ಶಿಫಾರಸು ::-

ವಿಷಯ: ಶ್ರೀ.ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ.ನಅಇ 99 ಡಿಎಂಕೆ 2017, ಬೆಂಗಳೂರು, ದಿನಾಂಕ:06/10/2017.
2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂ.ಉಪಲೋಕ್-2 /ಡಿಇ/400/2018, ಬೆಂಗಳೂರು, ದಿ:25/08/2018.
3) ಅಪರ ನಿಬಂಧಕರು ವಿಚಾರಣೆಗಳು-19, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವಿಚಾರಣಾ ವರದಿ ದಿ:13/02/2024.

*****

ಸರ್ಕಾರದ ಆದೇಶ ದಿನಾಂಕ:06/10/2017 ರಂತೆ ಶ್ರೀ.ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ/ಅಧಿಕಾರಿ ಅಂದರೆ ಚಿಕ್ಕದಾಗಿ 'ಆ.ಸ.ನೌಕರ' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯು ನಾಮನಿರ್ದೇಶನದ ಆದೇಶ ಸಂಖ್ಯೆ:ಉಪಲೋಕ್-2 /ಡಿಇ/400/2018, ಬೆಂಗಳೂರು, ದಿನಾಂಕ:25/08/2018ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-4 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ. ತದನಂತರ, ಆದೇಶ ಸಂಖ್ಯೆ:ಉಪಲೋಕ್-1 & 2/ಡಿಇ/ವರ್ಗಾವಣೆಗಳು/2023, ದಿನಾಂಕ 06-10-2023 ರಂತೆ ಅಪರ ನಿಬಂಧಕರು ವಿಚಾರಣೆಗಳು-19 ರವರಿಗೆ ಪ್ರಕರಣವು ವರ್ಗಾವಣೆಯಾಗಿ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ.ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

## ***ಅನುಬಂಧ-1***
## ***ದೋಷಾರೋಪಣೆ-1***

**ಆಸನೌ** ಶ್ರೀ.ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ **ಆದ ನೀವು,** ತುಮಕೂರು ಜಿಲ್ಲೆಯ ಮಧುಗಿರಿ ಪಟ್ಟಣದಲ್ಲಿ ಪುರಸಭೆಯಿಂದ ಲೈಸನ್ಸ್ ಪಡೆಯದೇ (1) ರಾಘವೇಂದ್ರ ನರ್ಸಿಂಗ್ ಹೋಂ, ತುಮಕೂರು ಗೇಟ್, (2) ರಾಘವೇಂದ್ರ ಬಡಾವಣೆಯಲ್ಲಿ ರಾಘವೇಂದ್ರ ನರ್ಸಿಂಗ್ ಹಾಸ್ಟೆಲ್ ಪಕ್ಕದ ಸಾರ್ವಜನಿಕ ಉದ್ಯಾನವನದ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಡ, (3) ತುಮಕೂರು ಗೇಟ್ ಅಂಚೆ ಕಚೇರಿ ಪಕ್ಕದ ಕಟ್ಟಡ ಮತ್ತು (4) ಸಾರ್ವಜನಿಕ ಆಸ್ಪತ್ರೆ ಪಕ್ಕದಲ್ಲಿ

ಪುರಾತತ್ವ ಇಲಾಖೆ ವ್ಯಾಪ್ತಿಗೆ ಒಳಪಡುವ ಸ್ಥಳದಲ್ಲಿ ನಿರ್ಮಿಸುತ್ತಿರುವ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಲಾಗಿದ್ದರೂ ಸಹಾ ಅವುಗಳನ್ನು ತೆರವುಗೊಳಿಸುವಲ್ಲಿ ಯಾವುದೇ ಕ್ರಮ ಜರುಗಿಸದೇ ಕರ್ತವ್ಯ ಲೋಪವೆಸಗಿರುತ್ತೀರಿ.

ಈ ಮೇಲೆ ಹೇಳಿದ 4 ಕಟ್ಟಡಗಳನ್ನು ಅಕ್ರಮವಾಗಿ ನಿರ್ಮಿಸಲಾಗಿದೆ ಎಂದು ನೀವು ನಿಮ್ಮ ಆಕ್ಷೇಪಣೆಯಲ್ಲಿ ಒಪ್ಪಿಕೊಂಡಿದ್ದು, ಸದರಿ ಅನಧಿಕೃತ ಕಟ್ಟಡಗಳನ್ನು ತಡೆಯುವಲ್ಲಿ ವಿಫಲರಾಗಿರುತ್ತೀರಿ ಮತ್ತು ಸದರಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮವನ್ನು ಕೈಗೊಳ್ಳದೇ ಕರ್ತವ್ಯಲೋಪವೆಸಗಿರುತ್ತೀರಿ. ಅದರಂತೆ ನೀವು ಸಾರ್ವಜನಿಕ/ ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ, ಸಾರ್ವಜನಿಕ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ಸರ್ಕಾರಿ ಸೇವಾ (ಸದ್ವರ್ತನೆ) ನಿಯಮಾವಳಿ 1966ರ ನಿಯಮ (3) (i) ರಿಂದ (iii) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದು, ಈ ವಿಚಾರಣಾ ಪ್ರಾಧಿಕಾರದ ಮುಂದೆ ವಿಚಾರಣೆಗೊಳಪಡುತ್ತೀರೆಂದು ಈ ದೋಷಾರೋಪಣೆ ಮಾಡಲಾಗಿದೆ.

4. ವಿಚಾರಣಾಧಿಕಾರಿ (ಅಪರ ನಿಬಂಧಕರು ವಿಚಾರಣೆಗಳು–19), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ರವರು ಮೌಖಿಕ ಹಾಗೂ ದಾಖಲಾತಿಗಳ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ, ಆ.ಸ.ನೌಕರರಾದ ಶ್ರೀ.ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ ರವರ ವಿರುದ್ಧ ಮೇಲ್ಕಾಣಿಸಿದ ದೋಷಾರೋಪಣೆಯನ್ನು ರುಜುವಾತುಪಡಿಸುವಲ್ಲಿ ಶಿಸ್ತು ಪ್ರಾಧಿಕಾರವು **'ಸಫಲವಾಗಿರುತ್ತದೆ'** ಎಂದು ಅಭಿಪ್ರಾಯಿಸಿದ್ದಾರೆ.

42

5. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಆ.ಸ.ನೌಕರರ ವಿರುದ್ಧದ ಆರೋಪವನ್ನು ರುಜುವಾತುಪಡಿಸಲು ಇಬ್ಬರು ಸಾಕ್ಷಿಗಳನ್ನು ಅಂದರೆ ಪಿ.ಡಬ್ಲ್ಯೂ–1 ಮತ್ತು 2 ರಂತೆ ವಿಚಾರಣೆಗೆ ಒಳಪಡಿಸಿ, ನಿಶಾನೆ ಪಿ–1 ರಿಂದ ಪಿ–7 ರಂತೆ ದಾಖಲಾತಿಗಳನ್ನು ಗುರುತಿಸಿಕೊಂಡಿದ್ದಾರೆ. ಆ.ಸ.ನೌಕರರು ತಮ್ಮ ಪರ ಯಾವೊಬ್ಬ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ ಹಾಗೂ ತಮ್ಮ ಪರ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

6. ಆ.ಸ.ನೌಕರರ ವಿರುದ್ಧ ಆಪಾದಿಸಿದ ಆರೋಪಗಳ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿ ಹಾಗೂ ಅದಕ್ಕೆ ಪೂರಕವಾಗಿ ಸಲ್ಲಿಸಿರುವ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಸಕಾರಣಗಳು ಕಂಡುಬಂದಿರುವುದಿಲ್ಲ. ಆದ್ದರಿಂದ, ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಅಂಗೀಕರಿಸುವಂತೆ ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

7. ಆ.ಸ.ನೌಕರರ ಪ್ರಥಮ ಮೌಖಿಕ ಹೇಳಿಕೆಯ ಪ್ರಕಾರ ಹಾಗೂ ವಿಚಾರಣಾಧಿಕಾರಿಗಳು ಸಲ್ಲಿಸಿರುವ ಮಾಹಿತಿಯಂತೆ, ಆ.ಸ.ನೌಕರರು ದಿನಾಂಕ:31/03/2034 ರಂದು ನಿವೃತ್ತಿ ಹೊಂದಲಿದ್ದಾರೆ.

೮. ಆ.ಸ.ನೌಕರರಾದ ಶ್ರೀ.ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ ರವರ ವಿರುದ್ಧದ ಆರೋಪದ ಸ್ವರೂಪವನ್ನು **'ಸಾಬೀತುಪಡಿಸಿದ'** ಮತ್ತು ಸಂಪೂರ್ಣತೆಯನ್ನು ಪರಿಗಣಿಸಿ:-

> "ಆ.ಸ.ನೌಕರರಾದ ಶ್ರೀ.ಜಿ.ನವೀನ್ ಚಂದ್ರ, ಮುಖ್ಯಾಧಿಕಾರಿಗಳು, ಪುರಸಭೆ, ಮಧುಗಿರಿ, ತುಮಕೂರು ಜಿಲ್ಲೆ ರವರಿಗೆ ಪಾವತಿಸಬೇಕಾಗಿರುವ 04 ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮ ಬೀರುವಂತೆ ತಡೆಹಿಡಿಯಲು ಈ ಮೂಲಕ ಸರ್ಕಾರಕ್ಕೆ ಶಿಫಾರಸು ಮಾಡಿದೆ."

9. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

16/2/24

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತ-2**
**ಕರ್ನಾಟಕ ರಾಜ್ಯ**